

ರೋರಿಕ್ ಬಿಡಿಸಿದ ರೋರಿಕ್ ರೇಖಾಚಿತ್ರ







ರೋರಿಕ್ ಸಮಾಧಿ

ರೋರಿಕ್ ವಾಸ ಮಾಡಿದ್ದ ಮನಾಲಿಯ ಮನೆ ಮತ್ತು ಕೋಣೆ

ಪ್ರಧಾನಿ ಜವಾಹರಲಾಲ್ ನೆಹರೂ, ರೋರಿಕ್‌ರ ಆತ್ಮೀಯ ಮಿತ್ರರಾಗಿದ್ದು ಆಗಾಗ ಮನಾಲಿಗೆ ಭೇಟಿ ನೀಡುತ್ತಿದ್ದರು. ಅವರಿಬ್ಬರ ಭೇಟಿಯ ನೆನಪಾಗಿ ಇಂದಿರಾ ಗಾಂಧಿಯವರೊಂದಿಗಿನ ಭಾವಚಿತ್ರವಿದೆ. ಗಾಂಧೀಜಿಯವರು, ನಗ್ಗರ್‌ನ ಈ ನಿವಾಸದಲ್ಲಿ ಹಲವಾರು ದಿನಗಳನ್ನು ಕಳೆದಿದ್ದು, ಅವರಿಬ್ಬರ ಭಾವಚಿತ್ರ ವಿಶ್ವದ ಇಬ್ಬರು ಮಹಾನ್ ಚೇತನಗಳ ಅಪೂರ್ವ ಸಂಗಮ ಅನ್ನಿಸಿತು. ಚಲನಚಿತ್ರ ಜಗತ್ತಿನ ಖ್ಯಾತನಾಮರಾದ ರೋರಿಕ್‌ರ ಸೊಸೆ ದೇವಿಕಾರಾಣಿ ಜತೆಗಿನ ರೋರಿಕ್ ಅವರ ಭಾವಚಿತ್ರವಂತೂ ಸೂಜಿಗಲ್ಲಿನಂತೆ ಎಲ್ಲರನ್ನೂ ಸೆಳೆಯುತ್ತಿತ್ತು.

ಹಲವಾರು ವರ್ಷಗಳ ಕಾಲ ಚಿತ್ರರಚನೆ ಹಾಗೂ ಸಾಹಿತ್ಯ ಕ್ರಿಯೆಯಲ್ಲಿ ರೋರಿಕ್‌ರ ಸಂಗಾತಿಯಾಗಿದ್ದ ದೇವದಾರು ಮರದ ಮೇಜು, ಕುರ್ಚಿಗಳು ಕುತೂಹಲ ಹುಟ್ಟಿಸುತ್ತವೆ. ಅದರ ಹಿಂಬದಿಯಲ್ಲಿ ರೋರಿಕ್ ಅವರ ಅಪರೂಪದ ಭಾವಚಿತ್ರವೊಂದಿದೆ. ಅವುಗಳ ಫೋಟೋ ತೆಗೆಯಲು ಅನುಮತಿ ಸಿಗಲಿಲ್ಲ. ಮೆಟ್ಟಲೇರಿ ಮೊದಲ ಮಹಡಿಗೆ ತೆರಳಿದರೆ ಅಲ್ಲಿ ರೋರಿಕ್ ಅವರ ವೈಯಕ್ತಿಕ ವಾಸಸ್ಥಳವಿದೆ.

ಕೆಳಗೆ ಇಳಿದು ಬಂದಾಗ, ನಿವಾಸದ ಪಾರ್ಶ್ವದಲ್ಲಿ ಅವರ ಸಂಗಾತಿಯಾಗಿದ್ದ 1930ರ ಮಾಡೆಲ್ ಡಾಡ್ಜ್ ವಾಹನ ಇತ್ತು. ಅದರಲ್ಲಿ ಕುಳಿತು ಕುಲು ಮನಾಲಿಯ ಏರು ತಗ್ಗುಗಳ, ಸುರುಳಿಯಾಕಾರದ ದಾರಿಯಲ್ಲಿ ಸಾಗುತ್ತಿದ್ದ ಅವರು, ಅತೀವ ಗೌರವ ಪ್ರೀತಿಯಿಂದ 'ಮಹಾಋಷಿ' ಎಂದೇ ಕರೆಯುತ್ತಿದ್ದ ಸ್ಥಳೀಯರಿಗೆ ಕೈಬೀಸುತ್ತಿದ್ದುದನ್ನು ಓದಿದ ನೆನಪಾಯಿತು. ಉದ್ದ ನಿಲುವಂಗಿ ಧರಿಸಿದ ನೀಳ ಶ್ವೇತ ಗಡ್ಡಧಾರಿ ನಿಕೋಲಸ್ ಸ್ಥಳೀಯರಿಗೆ ಹಿಮಗಿರಿಯ ಋಷಿಗಳಂತೆ ಕಂಡದ್ದರಲ್ಲಿ ಅಚ್ಚರಿಯೇನೂ ಇಲ್ಲ.

ನಿವಾಸದ ಬಳಿಯ ಕಡಿದಾದ ಮೆಟ್ಟಲುಗಳನ್ನು ಇಳಿದು ಹೋದದ್ದು ರೋರಿಕ್ ಅವರ ಸಮಾಧಿಯ ಬಳಿ. ಅವರ ಅಸಂಖ್ಯ ವರ್ಣಚಿತ್ರಗಳಿಗೆ ರೂಪದರ್ಶಿಯಾಗಿದ್ದ ಹಿಮಾಲಯದ ಪರ್ವತ ಶ್ರೇಣಿಯನ್ನು